ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 14 ಚಾಸಾ- 52**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಸಿ ಡಿ ಧರಣೇಶ್ |
| ತಂದೆಯ ಹೆಸರುಃ | : | ಲೇಟ್ ಸಿ ಎಂ ದ್ಯಾವೇಗೌಡ |
| ವಯಸ್ಸುಃ | : | 42 ವರ್ಷ |
| ಉದ್ಯೋಗಃ | : | ಪಶು ವೈದ್ಯಾಧಿಕಾರಿ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 19-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 1-7-2014 ರಿಂದ 31-8-2018ರವರೆಗೆ ಆಲೂರು ತಾಲ್ಲೂಕು ರಾಯರಕೊಪ್ಪಲಿನ ಪಶುಚಿಕಿತ್ಸಾಲಯದಲ್ಲಿ ಪಶುವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಹಾಸನ ಜಿಲ್ಲೆಯ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು ದಿನಾಂಕ 17-12-14ರಂದು ಪತ್ರಮುಖೇನ 4 ಸಿಂಧಿಹಸುಗಳ ನಿರ್ವಹಣೆಗೆ ತಗಲುವ ವೆಚ್ಚದ ಮಾಹಿತಿಯನ್ನು ಒದಗಿಸುವಂತೆ ಕೇಳಿದ್ದರು. ಅದರಂತೆ ನಾನು 19-12-14ರ ಪತ್ರದೊಂದಿಗೆ ಆ ಮಾಹಿತಿಯನ್ನು ಉಪನಿರ್ದೇಶಕರು ಮತ್ತು ಕರ್ನಾಟಕ ಲೋಕಾಯುಕ್ತ ಹಾಸನ ಇದರ ಪೊಲೀಸ್ ನಿರೀಕ್ಷಕರಿಗೂ ಕಳುಹಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಉಪನಿರ್ದೇಶಕರಿಗೆ ಕಳುಹಿಸಿದ ಪತ್ರವನ್ನು ನಿಪಿ-74 ಎಂದು ಪೊಲೀಸ್ ನಿರೀಕ್ಷಕರಿಗೆ ಕಳುಹಿಸಿದ ಪತ್ರವನ್ನು ನಿಪಿ-75 ಎಂದು ಇವೆರಡಲ್ಲಿ ನನ್ನ ರುಜುಗಳಿದ್ದು ಕ್ರಮವಾಗಿ ನಿಪಿ-74(ಎ) ಮತ್ತು ನಿಪಿ-75(ಎ) ಎಂದು ಗುರುತಿಸಲಾಯಿತು. ನಿಪಿ-

74 ಮತ್ತು 75ರ ಪತ್ರದೊಂದಿಗೆ ಕಳುಹಿಸಿದ ಮಾಹಿತಿಯನ್ನು ನೋಡುತ್ತಿದ್ದು ಕ್ರಮವಾಗಿ ನಿಪಿ-74(1) ಮತ್ತು 75(1) ಎಂದು ಗುರುತಿಸಲಾಯಿತು. ಅದು ತಲಾ 2 ಹಾಳೆಗಳನ್ನು ಒಳಗೊಂಡಿರುತ್ತದೆ. ನಿಪಿ-74(1) ಮತ್ತು 75(1)ರಲ್ಲಿ ನನ್ನ ರುಜುಗಳಿದ್ದು ಕ್ರಮವಾಗಿ ನಿಪಿ-74(1ಎ), 75(1ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ ಎಂ ಪಿ **ವಕೀಲರಿಂದಃ**

ಈ ವರದಿಗಳನ್ನು ನೀಡುವುದಕ್ಕಿಂತ ಮೊದಲು ನಾನು ಸ್ವತಃ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ. ಅವರಿಗೆ ಎಷ್ಟು ಎಕರೆ ಜಮೀನಿತ್ತೆಂದು ನಾನು ವರದಿ ಪಡೆದುಕೊಂಡಿಲ್ಲ. ಹಸುಗಳನ್ನು ಸಾಕುವವರಿಗೆ ಜಮೀನು ಇದ್ದಲ್ಲಿ ಅದರಿಂದ ಮೇವು ಸಿಗುತ್ತಿದ್ದಲ್ಲಿ ಆ ಹಣವನ್ನು ಕಡಿತಗೊಳಿಸಬೇಕೆನ್ನುವುದು ನಿಜ. ಅವರು ಮೇವನ್ನು ಬೆಳೆಸುತ್ತಿದ್ದರೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಇಲಾಖೆಯಿಂದ ಪ್ರತಿ ವರ್ಷ ಜಾನುವಾರು ಗಣತಿ ಮಾಡುತ್ತೇವೆ ಮತ್ತು ಹಸುಗಳಿಗೆ ಲಸಿಕೆಯನ್ನು ಮತ್ತು ಜಂತುನಾಶಕ ಔಷಧಿಯನ್ನು ಇಲಾಖಾ ವತಿಯಿಂದ ಉಚಿತವಾಗಿ ನೀಡುತ್ತೇವೆ. ನಮ್ಮಲ್ಲಿ ಜಾನುವಾರುಗಳಿಗೆ ಸಂಬಂಧಿಸಿದಂತೆ ಡಾಟಾ ನಿರ್ವಹಿಸುತ್ತೇವೆ. ವರದಿ ನೀಡುವುದಕ್ಕಿಂತ ಮೊದಲು ಅವರು ಜಾನುವಾರುಗಳಿಗೆ ಇಲಾಖೆಯಿಂದ ಹೊರತುಪಡಿಸಿ ಬೇರೆ ಕಡೆ ಚಿಕಿತ್ಸೆ ಕೊಡಿಸಿರುತ್ತಾರೋ ಎಂಬ ಬಗ್ಗೆ ನಾನು ಮಾಹಿತಿ ಪಡೆದಿಲ್ಲ. ಅವರು ಜಾನುವಾರುಗಳಿಗೆ ನಮ್ಮಲ್ಲಿ ಚಿಕಿತ್ಸೆ ಲಸಿಕೆ ಕೊಡಿಸಿದ್ದಲ್ಲಿ ಆ ಹಣವನ್ನು ಖರ್ಚುವೆಚ್ಚದಲ್ಲಿ ನಮೂದಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲವೂ ಉಚಿತವಾಗಿ ಸಿಗುವುದಿಲ್ಲ, ಕೆಲವೊಂದು ಔಷಧಿ ನಮ್ಮಲ್ಲಿ ಇರುವುದಿಲ್ಲ ಎನ್ನುತ್ತಾರೆ. ಆ ಜಾನುವಾರುಗಳಿಗೆ ಯಾವ ಯಾವಾಗ ಏನೇನು ಖಾಯಿಲೆ ಬಂತು, ಏನೇನು ಚಿಕಿತ್ಸೆ ಕೊಡಿಸಿದ್ದಾರೆಂಬ ಮಾಹಿತಿ ಪಡೆದಿಲ್ಲ. ಮನೆಯವರೇ ಜಾನುವಾರುಗಳ ನಿರ್ವಹಣೆ ಮಾಡಿಕೊಂಡಿದ್ದಲ್ಲಿ ಕೂಲಿಕಾರರ ಖರ್ಚು ಬರುವುದಿಲ್ಲ ಎಂದರೆ ಸರಿ. ಸಾಕಿದ ಜಾನುವಾರುಗಳು ಕರುಹಾಕಿದಾಗ ಅವುಗಳ ಖರೀದಿ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿ. ನಿರ್ವಹಣೆಗೆ ಕೇವಲ 3ಲಕ್ಷ ರೂಪಾಯಿ ಖರ್ಚಾಗಿದೆ ಆದರೆ ನಾನು ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ಹೆಚ್ಚು ಮೊತ್ತ ಕಾಣಿಸಿ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**